**Akashvani : Bangalore**
**National Bulletin In Kannada**
**04.11.2024 / 13.10 hrs**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**04.11.2024 / 13.10 hrs**

**<><*<><>*><>**

**ಮುಖ್ಯಾಂಶಗಳು**

೧. ಜಾರ್ಖಂಡ್ ವಿಧಾನಸಭಾ ಚುನಾವಣೆ; ಇಂದು ಗಡ್ವಾ, ಚೈಬಾಸಾನಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರಚಾರ

೨. ಸಚಿವ ಡಾ.ಎಸ್.ಜೈಶಂಕರ್ - ಕ್ವೀನ್ಸ್ ಲ್ಯಾಂಡ್ ಗವರ್ನರ್ ಜೀನೆಟ್ ಯಂಗ್ ಭೇಟಿ; ಆರ್ಥಿಕ, ವ್ಯಾಪಾರ, ಹೂಡಿಕೆ ಸಹಕಾರ ಕುರಿತು ಚರ್ಚೆ

೩. ಉತ್ತರಾಖಂಡ್‌ನ ಅಲ್ಮೋರಾ ಜಿಲ್ಲೆಯಲ್ಲಿ ಬಸ್ ಅಪಘಾತ; ೨೩ ಮಂದಿ ಸಾವು, ಹಲವರಿಗೆ ಗಾಯ

೪. ಪ್ರಸಕ್ತ ರಣಜಿ ಟ್ರೋಫಿ ಋತು ಬಳಿಕ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವೃದ್ಧಿಮಾನ್ ಸಹಾ ವಿದಾಯ

**<><*<><>*><>**

ಜಾರ್ಖಂಡ್ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಅಭ್ಯರ್ಥಿಗಳ ಪರ ಪ್ರಧಾನಿ ಹಾಗೂ ಹಿರಿಯ ಬಿಜೆಪಿ ನಾಯಕ ನರೇಂದ್ರ ಮೋದಿ ಅವರು ಇಂದು ಜಾರ್ಖಂಡ್‌ನಲ್ಲಿ ಚುನಾವಣಾ ರಾಲಿಗಳನ್ನು ಉದ್ದೇಶಿಸಿ ಮಾತನಾಡಿದರು. ಗಡ್ವಾದಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಜಾರ್ಖಂಡ್ ಬಿಜೆಪಿ ಘಟಕ ಉತ್ತಮ ಸಂಕಲ್ಪ ಪತ್ರವನ್ನು ಬಿಡಗಡೆ ಮಾಡಿದೆ. ಈ ಸಂಕಲ್ಪಪತ್ರ ಹೆಣ್ಣುಮಕ್ಕಳ, ಮಹಿಳೆಯರ ಹಾಗೂ ಈ ಮಣ್ಣಿನ ಗೌರವ, ಸುರಕ್ಷತೆ, ಹಾಗೂ ಸಮೃದ್ಧತೆಗಾಗಿ ಸಮರ್ಪಿತವಾಗಿದೆ ಎಂದರು. ಬಳಿಕ ಮಧ್ಯಾಹ್ನ ೩ ಗಂಟೆಗೆ ಚೈಬಾಸಾದಲ್ಲಿ ಮತ್ತೊಂದು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ಜಾರ್ಖಂಡ್ ನಲ್ಲಿ ಚುನಾವಣಾ ವೇಳಾಪಟ್ಟಿಯನ್ನು ಘೋಷಿಸಿದ ನಂತರ ಇದು ಪ್ರಧಾನಿ ಅವರ ಮೊದಲ ಚುನಾವಣಾ ರಾಲಿಯಾಗಿದೆ. ಇದೇ ತಿಂಗಳ ೧೩ ಮತ್ತು ೨೦ ರಂದು ಎರಡು ಹಂತಗಳಲ್ಲಿ ಜಾರ್ಖಂಡ್ ನಲ್ಲಿ ಮತದಾನ ನಡೆಯಲಿದೆ.

<><*<><>*><>

ಮುಂಬರುವ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೆ ನಾಮಪತ್ರ ಹಿಂಪಡೆಯಲು ಇಂದು ಕೊನೆಯ ದಿನವಾಗಿದೆ. ೨೮೮ ವಿಧಾನಸಭಾ ಕ್ಷೇತ್ರಗಳಿಗೆ  ಸಲ್ಲಿಸಲಾಗಿರುವ ೭ ಸಾವಿರದ ೭೩ ಅಭ್ಯರ್ಥಿಗಳ ನಾಮಪತ್ರಗಳು ಅಕ್ಟೋಬರ್ ೩೦ ರಂದು ಪರಿಶೀಲನೆಯ ನಂತರ ಮಾನ್ಯವಾಗಿವೆ. ಮಹಾರಾಷ್ಟ್ರದಲ್ಲಿ ಈ ತಿಂಗಳ ೨೦ ರಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದ್ದು, ಹೊಸ ವಿಧಾನಸಭೆಯನ್ನು ಆಯ್ಕೆ ಮಾಡಲಾಗುತ್ತದೆ. ಆಡಳಿತಾರೂಢ ಮಹಾಯುತಿ ಮತ್ತು ಪ್ರತಿಪಕ್ಷ ಮಹಾ ವಿಕಾಸ್ ಅಘಾಡಿ ಸ್ಪರ್ಧಿಸುತ್ತಿರುವ ಪ್ರಮುಖ ಮೈತ್ರಿಕೂಟಗಳಾಗಿವೆ. ಬಿಜೆಪಿ, ಶಿವಸೇನೆ ಮತ್ತು ಎನ್‌ಸಿಪಿಯನ್ನು ಒಳಗೊಂಡ ಆಡಳಿತಾರೂಢ ಮಹಾಯುತಿ ಮೈತ್ರಿಕೂಟ ಮತ್ತು ಕಾಂಗ್ರೆಸ್, ಶಿವಸೇನೆ (ಯುಬಿಟಿ) ಮತ್ತು ಎನ್ ಸಿಪಿ (ಶರದ್ ಚಂದ್ರ ಪವಾರ್ ಬಣ) ಒಳಗೊಂಡ ಪ್ರತಿಪಕ್ಷ ಮಹಾ ವಿಕಾಸ್ ಅಘಾಡಿ ಕಣದಲ್ಲಿರುವ ಪ್ರಮುಖ ಸ್ಪರ್ಧಿಗಳಾಗಿವೆ.

<><*<><>*><>

ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಬ್ರಿಸ್ಬೇನ್ ನಲ್ಲಿ ಇಂದು ಭಾರತದ ಹೊಸ ಕಾನ್ಸುಲೇಟ್ ಜನರಲ್ ಕಚೇರಿಯನ್ನು ಔಪಚಾರಿಕವಾಗಿ ಉದ್ಘಾಟಿಸಿದರು. ಕ್ವೀನ್ಸ್ ಲ್ಯಾಂಡ್ ನೊಂದಿಗೆ ಭಾರತದ ಸಂಬಂಧವನ್ನು ಬಲಪಡಿಸಲು, ವ್ಯಾಪಾರವನ್ನು ಉತ್ತೇಜಿಸಲು, ಶೈಕ್ಷಣಿಕ ಸಂಪರ್ಕಗಳನ್ನು ಬೆಳೆಸಲು ಮತ್ತು ವಲಸಿಗರಿಗೆ ಸೇವೆ ಸಲ್ಲಿಸಲು ಕಾನ್ಸುಲೇಟ್ ಕೊಡುಗೆ ನೀಡುತ್ತದೆ ಎಂದು ಡಾ.ಜೈಶಂಕರ್ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. ಕ್ವೀನ್ಸ್ ಲ್ಯಾಂಡ್ ಗವರ್ನರ್ ಡಾ. ಜೀನೆಟ್ ಯಂಗ್ ಅವರನ್ನು ಭೇಟಿಯಾದ  ಸಚಿವರು, ಭಾರತ ಮತ್ತು ಕ್ವೀನ್ಸ್ ಲ್ಯಾಂಡ್ ನಡುವಿನ ಆರ್ಥಿಕ, ವ್ಯಾಪಾರ ಮತ್ತು ಹೂಡಿಕೆ ಸಹಕಾರವನ್ನು ಬಲಪಡಿಸುವ ಅವಕಾಶಗಳು ಮತ್ತು ಮಾರ್ಗಗಳ ಬಗ್ಗೆ ಚರ್ಚಿಸಿದರು.

<><*<><>*><>

೨೦೩೦ ರ ವೇಳೆಗೆ ೫೦೦ ಗಿಗಾವ್ಯಾಟ್ ನವೀಕರಿಸಬಹುದಾದ ಇಂಧನ ಸಾಮರ್ಥ್ಯವನ್ನು ಸಾಧಿಸುವ ಗುರಿಯಲ್ಲಿ ಭಾರತ, ೯೦ ಗಿಗಾವ್ಯಾಟ್ ಸ್ಥಾಪಿತ ಸೌರ ಸಾಮರ್ಥ್ಯವನ್ನು ತಲುಪಿದೆ ಎಂದು ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ. ನವದೆಹಲಿಯ ಭಾರತ್ ಮಂಟಪದಲ್ಲಿಂದು ಅಂತರಾಷ್ಟ್ರೀಯ ಸೌರ ಒಕ್ಕೂಟದ ೭ನೇ ಅಧಿವೇಶನದ ಉದ್ಘಾಟನಾ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಅವರು,  ೩೭.೫ ಗಿಗಾವ್ಯಾಟ್‌ಗಳ ನವೀಕರಿಸಬಹುದಾದ ಸಾಮರ್ಥ್ಯದ ೫೦ ಸೋಲಾರ್ ಪಾರ್ಕ್‌ಗಳಿಗೆ ಸರ್ಕಾರ ಅನುಮೋದನೆ

ನೀಡಿದೆ ಎಂದು ಅವರು ಹೇಳಿದರು. ಇಂಧನ ಲಭ್ಯತೆ, ಭದ್ರತೆ ಮತ್ತು ಸಂಪ್ರದಾಯಗಳ ಮೇಲೆ ಪರಿಣಾಮ ಬೀರುವ ಅಂತಾರಾಷ್ಟ್ರೀಯ ಸೌರ ಒಕ್ಕೂಟದ ಉಪಕ್ರಮಗಳ ಬಗ್ಗೆ ಐಎಸ್ಎ ಅಧಿವೇಶನ ಚರ್ಚಿಸಲಿದ್ದು, ಸದಸ್ಯ ರಾಷ್ಟ್ರಗಳನ್ನು ಸೌರ ಶಕ್ತಿಯನ್ನು ಅಳವಡಿಸಿಕೊಳ್ಳಲು ಮತ್ತು ಸೌರ ನಿಯೋಜನೆಯನ್ನು ವೇಗಗೊಳಿಸಲು ಹಣಕಾಸು ಕ್ರೋಢೀಕರಿಸುವತ್ತ ಗಮನ ಹರಿಸುತ್ತದೆ.

<><*<><>*><>

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಸನಾತನ ಧರ್ಮದ ಅತಿದೊಡ್ಡ ಸಮಾವೇಶವಾದ ಪ್ರಯಾಗ್ ರಾಜ್ ಮಹಾಕುಂಭ ೨೦೨೫ ಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಆಹ್ವಾನಿಸಿದ್ದಾರೆ. ದೆಹಲಿಯಲ್ಲಿ ನಿನ್ನೆ ಉಭಯ ನಾಯಕರನ್ನು ಭೇಟಿ ಮಾಡಿದ ಅವರು, ಕೆಲವು ಗಂಟೆಗಳ ಕಾಲ ಮಾತುಕತೆ ನಡೆಸಿದರು. ಮಹಾಕುಂಭ ಮೇಳವು ಪೌಶ್ ಪೂರ್ಣಿಮಾ ಸ್ನಾನದೊಂದಿಗೆ ಪ್ರಾರಂಭವಾಗುತ್ತದೆ. ಇದು ೨೦೨೫ರ ಜನವರಿ ೧೩  ರಂದು ಆರಂಭವಾಗಿ ಮಹಾ ಶಿವರಾತ್ರಿಯ ದಿನವಾದ ಫೆಬ್ರವರಿ ೨೬ ರಂದು ಕೊನೆಯ ಸ್ನಾನದೊಂದಿಗೆ ಕೊನೆಗೊಳ್ಳುತ್ತದೆ. ಈ ಬಾರಿ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ನಾಯಕತ್ವದಲ್ಲಿ, ರಾಜ್ಯ ಸರ್ಕಾರವು ಪ್ರಯಾಗ್ ರಾಜ್ ನಲ್ಲಿ ೨೪ ಗಂಟೆಗಳ ಕಾಲ ಮಹಾಕುಂಭ ಮೇಳವನ್ನು ಹಿಂದಿನ ಎಲ್ಲಾ ಕುಂಭಗಳಿಗಿಂತ ಹೆಚ್ಚು ಭವ್ಯ ಮತ್ತು ದೈವಿಕವಾಗಿಸಲು ನಿರ್ಧರಿಸಿದೆ.

<><*<><>*><>

ಉತ್ತರಾಖಂಡದ ಅಲ್ಮೋರಾ ಜಿಲ್ಲೆಯಲ್ಲಿ ಬಸ್ಸೊಂದು ಆಳವಾದ ಕಮರಿಗೆ ಬಿದ್ದ ಪರಿಣಾಮ ೨೩ ಮಂದಿ ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ. ಮಾಧ್ಯಮ ವರದಿಗಳ ಪ್ರಕಾರ, ಬಸ್ ಗರ್ವಾಲ್ ನಿಂದ ಕುಮಾವೂನ್ ಗೆ ತೆರಳುತ್ತಿದ್ದಾಗ ಅಲ್ಮೋರಾದ ಕುಪಿ ಗ್ರಾಮದ ಬಳಿ ಈ ಅಪಘಾತ ಸಂಭವಿಸಿದೆ. ಬಸ್, ೨೦೦ ಮೀಟರ್ ಆಳದ ಕಮರಿಗೆ ಬಿದ್ದಾಗ ಬಸ್ಸಿನಲ್ಲಿ ಸುಮಾರು ೪೦ ಪ್ರಯಾಣಿಕರಿದ್ದರು. ಪೊಲೀಸರು ಮತ್ತು ಎಸ್ ಡಿಆರ್ ಎಫ್ ಸಿಬ್ಬಂದಿ ಸ್ಥಳಕ್ಕೆ ತಲುಪಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಆರಂಭಿಸಿದ್ದಾರೆ. ಖಾರ್ಖಂಡ್ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಅಪಘಾತದಲ್ಲಿ ಪ್ರಾಣಹಾನಿ ಕುರಿತು ದುಃಖ ವ್ಯಕ್ತಪಡಿಸಿದ್ದಾರೆ.

<><*<><>*><>

ಭಾರತ ಮತ್ತು ಅಲ್ಜೀರಿಯಾ ನಡುವೆ ಇಂದು ದ್ವಿಪಕ್ಷೀಯ ರಕ್ಷಣಾ ಸಹಕಾರದ ತಿಳುವಳಿಕಾ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಅಲ್ಜೀರಿಯಾಕ್ಕೆ ತಮ್ಮ ಭೇಟಿಯ ಕೊನೆಯ ದಿನವಾದ ಇಂದು ಸೇನಾ ಮುಖ್ಯಸ್ಥ ಜನರಲ್ ಅನಿಲ್ ಚೌಹಾನ್ ಮತ್ತು ಪೀಪಲ್ಸ್ ನ್ಯಾಷನಲ್ ಆರ್ಮಿಯ ಮುಖ್ಯಸ್ಥ ಸೈದ್ ಚನೆಗ್ರಿಹಾ ಸಹಿ ಹಾಕಿದ್ದಾರೆ. ಈ ಒಪ್ಪಂದ ಎರಡೂ ರಾಷ್ಟ್ರಗಳ ನಡುವಿನ ರಕ್ಷಣಾ ಪಾಲುದಾರಿಕೆಯನ್ನು ಉನ್ನತೀಕರಿಸುತ್ತದೆ. ಪರಸ್ಪರ ತಿಳುವಳಿಕೆಯನ್ನು ಉತ್ತೇಜಿಸುವ ಜೊತೆಗೆ ಕಾರ್ಯತಂತ್ರದ ಹಿತಾಸಕ್ತಿಗಳನ್ನು ಹೆಚ್ಚಿಸುತ್ತದೆ. ಇದೇ ವೇಳೆ ಜನರಲ್ ಅನಿಲ್ ಚೌಹಾನ್, ಜನರಲ್ ಸೈದ್ ಚನೆಗ್ರಿಹಾ ಅವರೊಂದಿಗೆ ದ್ವಿಪಕ್ಷೀಯ ಸೇನಾ ಸಹಕಾರ ಮತ್ತು ಸಾಮರ್ಥ್ಯ ವೃದ್ಧಿ ಕುರಿತು ಚರ್ಚೆ ನಡೆಸಿದರು. ಉಭಯ ಸೇನಾ ನಾಯಕರ ನಡುವೆ ಮೇಕ್ ಇನ್ ಇಂಡಿಯಾ ಉಪಕ್ರಮಗಳು ಮತ್ತು ತಂತ್ರಜ್ಞಾನ ವಿನಿಮಯದ ಬಗ್ಗೆಯೂ ಚರ್ಚೆ ನಡೆಯಿತು.

<><*<><>*><>

ಅಸ್ಸಾಂ ರಾಜ್ಯದಲ್ಲಿ ಈ ತಿಂಗಳು ೩ ರಿಂದ ೯ ರವರೆಗೆ ನಡೆಯಲಿರುವ ಭಾಷಾ ಗೌರವ ಸಪ್ತಾಹಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಶುಭಾಷಯ ತಿಳಿಸಿದ್ದಾರೆ ಎಂದು ಅಸ್ಸಾಂ ಮುಖ್ಯಮಂತ್ರಿ ಹೇಮಂತ್ ಬಿಸ್ವಾ ಸರ್ಮಾ ತಿಳಿಸಿದ್ದಾರೆ. ಭಾಷಾ ಗೌರವ ಸಪ್ತಾಹ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಸಂದೇಶ ಹಂಚಿಕೊಂಡಿರುವ ಪ್ರಧಾನಿ, ಅಸ್ಸಾಮಿ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ನೀಡುವಲ್ಲಿ ಅಸ್ಸಾಂನ ಜನರ ಉತ್ಸಾಹವನ್ನು ಎತ್ತಿ ಹಿಡಿಯಲು ಈ ವಾರ ಒಂದು ಗಮನಾರ್ಹ ಪ್ರಯತ್ನವಾಗಿದೆ ಎಂದು ಹೇಳಿದರು. ಈ ಕಾರ್ಯಕ್ರಮ ರಾಜ್ಯದ ಜನರನ್ನು ಪರಸ್ಪರ ಒಂದುಗೂಡಿಸುವ ಸಪ್ತಾಹವಾಗಿದ್ದು, ಜನರು ಅತ್ಯಂತ ಸಂಭ್ರಮದಿಂದ ಆಚರಿಸುತ್ತಾರೆ. ಅಸ್ಸಂನಿಂದ ಹೊರಗಿರುವ ಜನರು ಕೂಡ ಈ ಸಪ್ತಾಹದಲ್ಲಿ ಭಾಗವಹಿಸುವಂತೆ ಪ್ರಧಾನಿ ಮೋದಿ ಕೋರಿದ್ದಾರೆ. ಈ ಸಪ್ತಾಹದ ಉದ್ದೇಶ ಅಸ್ಸಾಂಮಿ ವೈವಿಧ್ಯತೆ ಮತ್ತು ಪರಂಪರೆ ಭಾಷೆಯ ಹಿರಿಮೆಯನ್ನು ಗೌರವಿಸುವುದಾಗಿದೆ ಎಂದು ತಿಳಿಸಿದ್ದಾರೆ.

<><*<><>*><>

ಭಾರತೀಯ ರೈಲ್ವೆ ಇಂದು ದೆಹಲಿ-ಎನ್ ಸಿಆರ್ ನಿಂದ ದೇಶದ ವಿವಿಧ ಭಾಗಗಳಿಗೆ ಸುಮಾರು ೧೫ ಹಬ್ಬದ ವಿಶೇಷ ರೈಲುಗಳ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಿದೆ. ಇವುಗಳಲ್ಲಿ ಸಹರ್ಸಾ, ವಾರಣಾಸಿ, ಅಯೋಧ್ಯೆ, ಲಖನೌ, ಪಾಟ್ನಾ, ಮುಜಾಫರ್ ಪುರ, ಗೋರಖ್ ಪುರ, ಪ್ರಯಾಗ್ ರಾಜ್, ದರ್ಭಂಗಾ, ಇಂದೋರ್ ಮತ್ತು ತಿರುವನಂತಪುರಂಗೆ ವಿಶೇಷ ರೈಲುಗಳು ಸೇರಿವೆ. ಛಟ್ ಪೂಜೆಯ

ಸಮಯದಲ್ಲಿ ಸುಗಮ ಪ್ರಯಾಣವನ್ನು ಖಚಿತಪಡಿಸಿಕೊಳ್ಳಲು ಈ ತಿಂಗಳ ೨ ರಿಂದ ೮ ರವರೆಗೆ ೧೪೫ ಹೆಚ್ಚುವರಿ ವಿಶೇಷ ರೈಲುಗಳನ್ನು ಓಡಿಸಲಾಗುತ್ತಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.

<><*<><>*><>

ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ನಿರ್ದಿಷ್ಟವಾಗಿ ಪರಿಹರಿಸಲು ಮತ್ತು ಸಮುದಾಯದ ಮುಖಂಡರ ಬೇಡಿಕೆಗಳನ್ನು ಪರಿಹರಿಸಲು ಮೀಸಲಾದ ಹಿಂದುಳಿದ ವರ್ಗಗಳ ಆಯೋಗವನ್ನು ಸ್ಥಾಪಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಬಿ.ಸಿ. ಮುಖಂಡ ಆರ್.ಕೃಷ್ಣಯ್ಯ ಸಲ್ಲಿಸಿದ್ದ ರಿಟ್ ಅರ್ಜಿಗೆ ಪ್ರತಿಕ್ರಿಯೆಯಾಗಿ ಕಳೆದ ವಾರ ಹೈಕೋರ್ಟ್ ನೀಡಿದ ತೀರ್ಪಿನ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಎರಡು ವಾರಗಳಲ್ಲಿ ಮೀಸಲಾದ ಆಯೋಗವನ್ನು ರಚಿಸುವಂತೆ ನ್ಯಾಯಾಲಯವು ಸರ್ಕಾರಕ್ಕೆ ಆದೇಶಿಸಿತ್ತು.

<><*<><>*><>

ಭಾರತದ ಕ್ರಿಕೆಟ್ ತಂಡದ ವಿಕೆಟ್ ಕೀಪರ್ - ಬ್ಯಾಟರ್ ವೃದ್ಧಿಮಾನ್ ಸಹಾ ಕ್ರಿಕೆಟ್ ನಿಂದ ನಿವೃತ್ತಿ ಘೋಷಿಸಿದ್ದಾರೆ. ಪ್ರಸ್ತುತ ನಡೆಯುತ್ತಿರುವ ರಣಜಿ ಟ್ರೋಫಿ ಋತುವು ನನ್ನ ಕೊನೆಯ ಟೂರ್ನಿಯಾಗಿದೆ ಎಂದು ಅವರು ಹೇಳಿದ್ದಾರೆ. ೪೦ ವರ್ಷದ ಬಂಗಾಳದ ವಿಕೆಟ್ ಕೀಪರ್, ೨೦೧೦ ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದಾಗಿನಿಂದ ಭಾರತದ ಪರ ೪೦ ಟೆಸ್ಟ್ ಮತ್ತು ೯ ಏಕದಿನ ಪಂದ್ಯಗಳನ್ನು ಆಡಿದ್ದಾರೆ. ಕ್ರಿಕೆಟ್ ನಲ್ಲಿ ಪ್ರೀತಿಯ ಪ್ರಯಾಣದ ನಂತರ, ಈ ಋತುವು ತನ್ನ ಕೊನೆಯ ಋತುವಾಗಲಿದೆ ಎಂದು ಸಹಾ ಸಾಮಾಜಿಕ ಜಾಲತಾಣದಲ್ಲಿ ಹೇಳಿದ್ದಾರೆ.

<><*<><>*><>

ಅಮೆರಿಕದ ಕೊಲೊರಾಡೊದಲ್ಲಿ ನಡೆದ ೧೯ ವರ್ಷದೊಳಗಿನವರ ವಿಶ್ವ ಬಾಕ್ಸಿಂಗ್ ಚಾಂಪಿಯನ್ ಷಿಪ್ ನಲ್ಲಿ ಭಾರತವು ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ನಾಲ್ಕು ಚಿನ್ನ ಸೇರಿದಂತೆ ೧೭ ಪದಕಗಳನ್ನು ಗೆದ್ದಿದೆ. ೯ ಪುರುಷರು ಮತ್ತು ೧೦ ಮಹಿಳೆಯರನ್ನು ಒಳಗೊಂಡ ಭಾರತ ತಂಡದಲ್ಲಿ ೧೨ ಕ್ರೀಡಾಪಟುಗಳು ಫೈನಲ್ ತಲುಪಿದ್ದರು. ನಾಲ್ಕು ಚಿನ್ನದ ಪದಕ ವಿಜೇತರಲ್ಲಿ ಏಕೈಕ ಪುರುಷ ಚಾಂಪಿಯನ್ ಹೇಮಂತ್ ಸಾಂಗ್ವಾನ್ ಮತ್ತು ಮಹಿಳಾ ಚಾಂಪಿಯನ್ ಕೃಷ್ಣ ವರ್ಮಾ, ಪಾರ್ಥವಿ ಗ್ರೆವಾಲ್ ಮತ್ತು ವಂಶಿಕಾ ಗೋಸ್ವಾಮಿ ಸೇರಿದ್ದಾರೆ.

<><*<><>*><>

ಚೆನ್ನೈನ ಮೇಯರ್ ರಾಧಾಕೃಷ್ಣನ್ ಹಾಕಿ ಸ್ಟೇಡಿಯಂನಲ್ಲಿ ೧೪ನೇ ಹಾಕಿ ಇಂಡಿಯಾ ಸೀನಿಯರ್ ಪುರುಷರ ರಾಷ್ಟ್ರೀಯ ಚಾಂಪಿಯನ್ ಷಿಪ್ ಇಂದು ಆರಂಭವಾಗಲಿದೆ. ನವೆಂಬರ್ ೧೮ ರವರೆಗೆ ನಡೆಯಲಿರುವ ಪಂದ್ಯಾವಳಿಯಲ್ಲಿ ಪಾಲ್ಗೊಂಡಿರುವ ೩೧ ತಂಡಗಳನ್ನು ಎಂಟು ಗುಂಪುಗಳಾಗಿ ವಿಂಗಡಿಸಲಾಗಿದ್ದು, ಪ್ರಶಸ್ತಿಗಾಗಿ ಸೆಣಸಲಿವೆ. ಲೀಗ್ ಹಂತದಲ್ಲಿ, ತಂಡಗಳು ತಮ್ಮ ಗುಂಪಿನ ಇತರ ತಂಡಗಳೊಂದಿಗೆ ಹೋರಾಟ ನಡೆಸಲಿದ್ದು, ಪ್ರತಿ ಗುಂಪಿನಿಂದ ಅಗ್ರ ತಂಡವು ನವೆಂಬರ್ ೧೩ರಂದು ನಡೆಯಲಿರುವ ಕ್ವಾರ್ಟರ್ ಫೈನಲ್ ಗೆ ಮುನ್ನಡೆಯಲಿವೆ. ನವೆಂಬರ್ ೧೫ ರಂದು ಸೆಮಿಫೈನಲ್, ನವೆಂಬರ್ ೧೮ ರಂದು ಫೈನಲ್ ಮತ್ತು ೩ ಮತ್ತು ೪ ನೇ ಸ್ಥಾನದ ಪ್ಲೇ ಆಫ್ ಪಂದ್ಯಗಳು ನಡೆಯಲಿವೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಅಪರಾಹ್ನ ೨.೩೦ ಕ್ಕೆ <>*><>